ಎನ್.ಜಿ.ಇ.ಎಫ್. ಕಾರ್ಖಾನೆಯ ಪುನಶ್ಚೇತನ

524 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಎನ್.ಜಿ.ಇ.ಎಫ್. ಕಾರ್ಖಾನೆಯ ಪುನಶ್ಚೇತನಕ್ಕಾಗಿ ಸರ್ಕಾರದವರು ಯೋಜಿಸಿರುವರೇ?*

ಆ) *ಪುನಶ್ಚೇತನಕ್ಕೆ ಒಟ್ಟು ಎಷ್ಟು ಹಣ ಬೇಕಾಗುತ್ತದೆ?*

ಇ) *ಹಾಗಿದ್ದಲ್ಲಿ, ಇದಕ್ಕೆ ಸಂಬಂಧಪಟ್ಟ ರೂಪರೇಷನ್‌ಗಳನ್ನೇನಾದರೂ ಮಾಡಿದೆಯೇ, ಮಾಡಿದ್ದರೆ ಅದರ ವಿವರ ನೀಡುವುದು?*

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು.

ಆ) ಸಮಗ್ರ ಪ್ರಸ್ತಾವನೆಗೆ ಸುಮಾರು 175 ಕೋಟಿ ರೂಪಾಯಿಗಳು.

ಇ) 1) ಸ್ವಯಂ ನಿವೃತ್ತಿ ಯೋಜನೆಯ ಮೂಲಕ ಮಾನವ ಬಲದ ಮೇಲ್ವೆಚ್ಚಗಳನ್ನು ತಗ್ಗಿಸುವುದು.

2) ಹಣಕಾಸು ಸಂಸ್ಥೆಗಳೊಂದಿಗೆ ಒಂದೇ ಬಾರಿಗೆ ಎಲ್ಲವನ್ನೂ ಇತ್ಯರ್ಥಪಡಿಸಿ ಬಡ್ಡಿಯ ಮೇಲ್ವೆಚ್ಚಗಳನ್ನು ತಗ್ಗಿಸುವುದು.

3) 300 ಕೋಟಿ ರೂ.ಗಳ ವಹಿವಾಟು ಸಾಧಿಸುವುದಕ್ಕಾಗಿ ಪ್ರತಿಯೊಂದು ವಿಭಾಗದಲ್ಲಿ ಉತ್ಪಾದನೆಯನ್ನು ಗರಿಷ್ಟಗೊಳಿಸುವುದು, ಮತ್ತು

4) ಕಾರ್ಯವ್ಯವಸ್ಥೆ ಹಾಗೂ ವಿಧಾನಗಳಲ್ಲಿ ಸುಧಾರಣೆಯ ಮೂಲಕ ವೆಚ್ಚಗಳನ್ನು ಕಡಿಮೆ ಮಾಡಿ ಲಾಭದಾಯಕತೆಯನ್ನು ಹೆಚ್ಚು ಮಾಡುವುದು.

ಸಕಲೇಶಪುರ ಆಲೂರು ತಾಲ್ಲೂಕುಗಳಿಗೆ ಸಾರಿಗೆ ಸಂಪರ್ಕ

525 - ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಸಾರಿಗೆ ಸಂಪರ್ಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಕಲೇಶಪುರ ಮತ್ತು ಆಲೂರು ತಾಲ್ಲೂಕು ಸಾರ್ವಜನಿಕರಿಗೆ ಸಾರಿಗೆ ಸಂಪರ್ಕ ಸರಿಯಾಗಿ ಇಲ್ಲದಿರುವುದರಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಇದನ್ನು ನಿವಾರಣೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.